**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>**
**<u>ಘನ ನ್ಯಾಯಾಲಯದಲ್ಲಿ</u>**

**<u>ಪ್ರಕರಣ ಸಂಖ್ಯೆಃ ಸ್ಪೆಷಲ್ ಕೇಸ್ 48/2014</u>**

ದಿನಾಂಕಃ 16.12.2021
(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.)

ಪ್ರಾ.ಸಾಃ 4 (ಚಾ.ಸಾ.3)

| | | |
|---|---|---|
| ಹೆಸರು | ಃ | ರಾಜಪ್ಪ |
| ತಂದೆಯ ಹೆಸರು | ಃ | ಹೊನ್ನಪ್ಪ |
| ವಯಸ್ಸು | ಃ | 58 ವರ್ಷ |
| ಉದ್ಯೋಗ | ಃ | ಪ್ರ.ದ.ಸಹಾಯಕರು |
| ವಾಸ ಸ್ಥಳ | ಃ | ಹಾರೋಹಳ್ಳಿ |

**<u>ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಅಭಿಯೋಜಕರಿಂದಃ</u>**

ನಾನು 2010 ರಲ್ಲಿ ರಾಮನಗರದ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜಿನಲ್ಲಿ ದ್ವಿ.ದ.ಸಹಾಯಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆನು. ಆ ಸಮಯದಲ್ಲಿ ನನ್ನ ಮೇಲಾಧಿಕಾರಿ ಪ್ರಾಂಶಪಾಲರಾದ ರೆಹಮಾನರವರು ಆಗಿದ್ದರು.

2. ತಾಃ 06.08.2010 ರಂದು ಡಿಡಿಪಿಐ ಕಚೇರಿಯಿಂದ ನಮ್ಮ ಪ್ರಾಂಶುಪಾಲರಿಗೆ ಫೋನ್ ಕರೆ ಬಂದಿದ್ದು, ಲೋಕಾಯುಕ್ತ ಪೊಲೀಸರಿಗೆ ತನಿಖೆಯಲ್ಲಿ ಸಹಕರಿಸಲು ನನ್ನನ್ನು ಕಳುಹಿಸುವಂತೆ ಹೇಳಿದ್ದರು. ಅದರಂತೆ ಮಧ್ಯಾಹ್ನ 12.45 ಗಂಟೆಗೆ ನಾನು ಲೋಕಾಯುಕ್ತ ಕಚೇರಿಗೆ ಹೋದೆನು. ಲೋಕಾಯುಕ್ತ ಕಚೇರಿಯಲ್ಲಿ ಇನ್ಸಪೆಕ್ಟರ್, ಉಪ ನೋಂದಣಾಧಿಕಾರಿ ಕಚೇರಿಯ -ಯೋಗೇಶರವರು ಇದ್ದರು. ಲೋಕಾಯುಕ್ತ ಕಚೇರಿಯಲ್ಲಿ ಪ್ರಕರಣದ ಪಿರ್ಯಾದಿ ಗುರುರಾಜು ಎನ್ನುವವರು ಸಹ ಇದ್ದರು. ಲೋಕಾಯುಕ್ತ ಅಧಿಕಾರಿ ನಮ್ಮ ಪರಸ್ಪರ ಪರಿಚಯ ಮಾಡಿಕೊಟ್ಟರು.

**3.** ಪಿರ್ಯಾದಿ ಕೊಟ್ಟಿದ್ದ ದೂರನ್ನು ಲೋಕಾಯುಕ್ತ ಅಧಿಕಾರಿ ನನಗೆ ತೋರಿಸಿದರು. ದೂರನ್ನು ನಾನು ನೋಡಿದೆ. ಪಿರ್ಯಾದಿಯ ತನ್ನ ತಂದೆಯ ಹೆಸರಿನಲ್ಲಿದ್ದ ಜಮೀನಿನ ಪೌತಿ ಖಾತೆ ಮಾಡುವಂತೆ ರಾಮನಗರದ ತಾಲ್ಲೂಕು ಕಚೇರಿಗೆ ಅರ್ಜಿ ಸಲ್ಲಿಸಿದ್ದು, ಕೈಲಾಂಚ ಹೋಬಳಿಯ ಲೆಕ್ಕಾಧಿಕಾರಿಗಳಾಗಿದ್ದ ಹರ್ಷ ಮತ್ತು ಮೋಹನ್ ಇವರುಗಳು ಸದರಿ ಪೌತಿ ಖಾತೆ ಮಾಡಿಕೊಡಲು ರೂ.60,000/- ಲಂಚ ಕೇಳಿದ್ದರು ಎಂದು ತಿಳಿದು ಬಂದಿತು. ಪಿರ್ಯಾದಿ ತನಗೆ ರೂ.60 ಸಾವಿರ ಲಂಚ ಕೊಡಲು ಆಗುವುದಿಲ್ಲ, ರೂ.25 ಸಾವಿರ ಲಂಚ ಕೊಡುತ್ತೇನೆ ಎಂದು ಹೇಳಿದ್ದರು ಎಂದು ಗೊತ್ತಾಯಿತು. ಈ ಬಗ್ಗೆ ಅಲ್ಲಿದ್ದ ಪಿರ್ಯಾದಿ - ಗುರುರಾಜು ಸಹ ನನಗೆ ಹೇಳಿದರು.

**4.** ತನಿಖಾಧಿಕಾರಿಗಳು ಪಿರ್ಯಾದಿಗೆ ಲಂಚವಾಗಿ ಕೊಡಲು ತಂದಿದ್ದ ಹಣವನ್ನು ಹಾಜರುಪಡಿಸುವಂತೆ ತಿಳಿಸಿದರು. ಅದರಂತೆ ಪಿರ್ಯಾದಿ ರೂ.1000 ಮುಖಬೆಲೆಯ 21 ನೋಟುಗಳನ್ನು ಮತ್ತು ರೂ.500 ಮುಖಬೆಲೆಯ 8 ನೋಟುಗಳನ್ನು ಹಾಜರುಪಡಿಸಿದರು. ಆ ನೋಟುಗಳನ್ನು ನೋಡಿದರೆ ಗುರುತಿಸಬಲ್ಲೆ. ಆ ನೋಟುಗಳನ್ನು ಈಗಾಗಲೇ ಎಂ.ಓ.1 ಎಂದು ಗುರುತಿಸಲಾಗಿದೆ.

**(ಎಂ.ಓ.1 - ನೋಟುಗಳನ್ನು ಈ ಸಾಕ್ಷಿ ಗುರುತಿಸುವುದನ್ನು ತಾವು ವಿವಾದಿಸುವುದಿಲ್ಲವೆಂದು ಆರೋಪಿ ಪರ ಶ್ರೀ.ವಿಎಂ., ವಕೀಲರು ನುಡಿದಿರುತ್ತಾರೆ.)**

**5.** ಸದರಿ ನೋಟುಗಳಿಗೆ ಲೋಕಾಯುಕ್ತ ಪೊಲೀಸರು ಬಿಳಿ ಬಣ್ಣದ ಪುಡಿಯನ್ನು ಹಚ್ಚಿದರು ಹಾಗು ಸದರಿ ನೋಟುಗಳನ್ನು ಯೋಗೇಶ ಕೈಯಲ್ಲಿ ಕೊಟ್ಟರು. ಅದಕ್ಕೂ ಮೊದಲು ಸದರಿ ನೋಟುಗಳನ್ನು ನಾನು ಎಣಿಸಿದೆ ಹಾಗು ಅವುಗಳ ಕ್ರಮಸಂಖ್ಯೆಯನ್ನು ನಾನು ಹೇಳಿದಂತೆ ಯೋಗೇಶ ಒಂದು ಕಾಗದ ಮೇಲೆ ಬರೆದುಕೊಂಡರು. ಆ ದಾಖಲೆಯನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.25 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ಈಗ ನಿಪಿ.25(ಬಿ) ಎಂದು ಗುರುತಿಸಲಾಯಿತು.

**6.** ತನಿಖಾಧಿಕಾರಿಗಳ ನಿರ್ದೇಶನದ ಮೇರೆಗೆ ಪಿರ್ಯಾದಿ ಧರಿಸಿದ್ದ ಶರ್ಟಿನ ಎಡ ಜೇಬನ್ನು ಯಾವುದೇ ಕಾಗದ ಅಥವಾ ಹಣ ಇಲ್ಲದೇ ಇರುವ ಬಗ್ಗೆ

ನಾನು ಪರಿಶೀಲಿಸಿ, ಅಲ್ಲಿ ಯಾವುದೇ ವಸ್ತು ಇಲ್ಲದೇ ಇರುವುದನ್ನು ಖಾತರಿಪಡಿಸಿದೆನು. ನಂತರ ಯೋಗೇಶ ಎಂ.ಓ.1 ನೋಟುಗಳನ್ನು ತನಿಖಾಧಿಕಾರಿಗಳ ನಿರ್ದೇಶನ ಮೇರೆಗೆ ಪಿರ್ಯಾದಿಯ ಶರ್ಟ್‌ನ ಎಡಜೇಬಿನಲ್ಲಿ ಇರಿಸಿದರು.

**7.** ಎಂ.ಓ.1 ಹಣವನ್ನು ಮೇಲೆ ಹೇಳಿದ ಲೆಕ್ಕಾಧಿಕಾರಿಗಳು ಲಂಚಕ್ಕಾಗಿ ಒತ್ತಾಯ ಮಾಡಿದರೆ ಮಾತ್ರ ಕೊಡುವಂತೆ ತನಿಖಾಧಿಕಾರಿಗಳು ಪಿರ್ಯಾದಿಗೆ ಸೂಚನೆ ನೀಡಿದರು. ಒಂದು ವೇಳೆ ಸರ್ಕಾರಿ ಅಧಿಕಾರಿ ಲಂಚದ ಹಣವನ್ನು ಸ್ವೀಕರಿಸಿದರೆ ತನ್ನ ತಲೆಯನ್ನು ಸವರಿಕೊಂಡು ಸೂಚನೆ ನೀಡುವಂತೆಯೂ ತಿಳಿಸಿದರು.

**8.** ನಂತರ ಯೋಗೇಶರವರ ಕೈಯನ್ನು ದ್ರಾವಣದಲ್ಲಿ ತೊಳೆಸಿದರು. ತೊಳೆಸುವುದಕ್ಕೂ ಮೊದಲು ಅದು ಬಿಳಿ ಬಣ್ಣದ ದ್ರಾವಣವಾಗಿತ್ತು. ಕೈ ತೊಳೆಸಿದ ನಂತರ ಸದರಿ ದ್ರಾವಣ ಗುಲಾಬಿ ಬಣ್ಣಕ್ಕೆ ತಿರುಗಿತು. ಸದರಿ ದ್ರಾವಣವನ್ನು ಒಂದು ಬಾಟಲಿನಲ್ಲಿ ಹಾಕಿ ಸೀಲು ಮಾಡಿದರು. ಆ ಬಗ್ಗೆ ನಾನು ಸಹಿ ಮಾಡಿರುತ್ತೇನೆ.

**9.** ಆ ಸಮಯದಲ್ಲಿ ಫೋಟೋಗಳನ್ನು ತೆಗೆಸಿದರು. ಆ ಫೋಟೋಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ಈಗಾಗಲೇ ನಿಪಿ.10 ರಿಂದ ನಿಪಿ.13 ಎಂದು ಗುರುತಿಸಲಾಗಿದೆ.

**10.** ತನಿಖಾಧಿಕಾರಿಗಳು ಆರೋಪಿ - ಮೋಹನ್‌ಗೆ ಫೋನ್ ಮಾಡಿ ಆತ ಎಲ್ಲಿದ್ದಾರೆ ಎಂದು ತಿಳಿದುಕೊಳ್ಳಿ ಎಂದು ಪಿರ್ಯಾದಿ - ಗುರುರಾಜಗೆ ಹೇಳಿದರು. ಆ ರೀತಿ ಪಿರ್ಯಾದಿ ಫೋನ್ ಮಾಡಿದಾಗ ತಾನು ರಾಮನಗರದ ಶಾನ್ ಟಾಕೀಸ್ ಬಳಿ ಇರುವುದಾಗಿ ಮೋಹನ್ ಪಿರ್ಯಾದಿಗೆ ಹೇಳಿದರು ಎಂದು ಗೊತ್ತಾಯಿತು.

**11.** ಯೋಗೇಶರವರಿಗೆ ತನಿಖಾಧಿಕಾರಿಗಳು ನೀವು ಪಿರ್ಯಾದಿಯ ಜೊತೆ ಇರಿ ಎಂದು ಹಾಗು ನನಗೆ ನೀವು ಜೊತೆಯಲ್ಲಿ ಹಿಂದೆ ಇರಿ ಎಂದು ನನಗೆ ಹೇಳಿದರು. ಈ ಎಲ್ಲಾ ಪ್ರಕ್ರಿಯೆಗಳ ಬಗ್ಗೆ ಲೋಕಾಯುಕ್ತ ಕಚೇರಿಯಲ್ಲಿ ಒಂದು ವಿವರವಾದ ಪಂಚನಾಮೆ ಬರೆಯಲಾಯಿತು. ಆ ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.2 ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.2(ಸಿ) ಎಂದು ಗುರುತಿಸಲಾಯಿತು.

12. ನಂತರ ನಾನು, ತನಿಖಾಧಿಕಾರಿ, ಪಿರ್ಯಾದಿ, ಪಂಚ – 1 – ಯೋಗೇಶ ಮತ್ತು ಸಿಬ್ಬಂದಿಗಳು ಒಟ್ಟಾಗಿ ಮಧ್ಯಾಹ್ನ 2.20 ಗಂಟೆಗೆ ಲೋಕಾಯುಕ್ತ ಕಚೇರಿಯಿಂದ ಹೊರಟು ಮಧ್ಯಾಹ್ನ 2.30 ಕ್ಕೆ ರಾಮನಗರದ ಶಾನ್ ಥಿಯೇಟರ್ ಬಳಿ ತಲುಪಿದೆವು. ಯೋಗೇಶ ಹಾಗು ಪಿರ್ಯಾದಿಯನ್ನು ತನಿಖಾಧಿಕಾರಿಗಳು ಮೊದಲು ಸದರಿ ಥಿಯೇಟರ್‌ನ ಒಳಗೆ ಕಳುಹಿಸಿದರು. ನಾವು ಸುಮಾರು 50-60 ಅಡಿ ದೂರದಲ್ಲಿದ್ದೆವು.

13. ನಂತರ ಮಧ್ಯಾಹ್ನ 2.45 ರ ಹೊತ್ತಿಗೆ ಮೋಹನ್ ಥಿಯೇಟರನ ಒಳಗಿನಿಂದ ಥಿಯೇಟರ್ ಈಚೆಗೆ ಬಂದರು. 50-60 ಅಡಿ ದೂರದಲ್ಲಿ ನಿಂತಿದ್ದ ನಮಗೆ ಪಿರ್ಯಾದಿ - ಗುರುರಾಜು ರವರು ಮೋಹನ್‌ರವರಿಗೆ ಹಣವನ್ನು ಕೊಟ್ಟಿದ್ದು, ಹಾಗು ಮೋಹನ್ ಹಣವನ್ನು ಎಣಿಸಿ ಕೊಳ್ಳುತ್ತಿದ್ದು ಕಂಡಿತು. ನಂತರ ಮೋಹನ್ ಸದರಿ ಹಣವನ್ನು ತಮ್ಮ ಪ್ಯಾಂಟಿನ ಹಿಂಭಾಗದ ಜೇಬಿನಲ್ಲಿಟ್ಟುಕೊಂಡರು.

14. ನಂತರ ನಾನು, ಲೋಕಾಯುಕ್ತ ಪೊಲೀಸರು ಪಿರ್ಯಾದಿ ಮತ್ತು ಆರೋಪಿ - ಮೋಹನ್ ಇದ್ದ ಸ್ಥಳಕ್ಕೆ ಹೋದೆವು. ನಂತರ ತನಿಖಾಧಿಕಾರಿಗಳು ಪಿರ್ಯಾದಿಯನ್ನು ವಿಚಾರಿಸಿದಾಗ ಪಿರ್ಯಾದಿ - ಗುರುರಾಜು ತಾನು ಆರೋಪಿ - ಮೋಹನ್‌ಗೆ ಹಣ ಕೊಟ್ಟಿರುವುದಾಗಿ ಹೇಳಿ, ಮೋಹನ್‌ರವರನ್ನು ತೋರಿಸಿದರು. ತನಿಖಾಧಿಕಾರಿಗಳು ಯೋಗೇಶರವರನ್ನು ವಿಚಾರಿಸಿದಾಗ ಅವರೂ ಸಹ ಆರೋಪಿ - ಮೋಹನ್‌ಗೆ ಪಿರ್ಯಾದಿ ಹಣ ಕೊಟ್ಟ ವಿಚಾರವನ್ನು ತಿಳಿಸಿದರು.

15. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿ - ಮೋಹನ್‌ರವರನ್ನು ನೋಡಿ ಗುರುತಿಸಿರುತ್ತಾರೆ.

**(ಮುಂದುವರೆದ ಮುಖ್ಯವಿಚಾರಣೆಯನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ರಮಾ ಬಿ.ಜಿ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

**ದಿನಾಂಕ : 23.02.2022**
**ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ :**

**16.** ಸದರಿ ಶಾನ್ ಥಿಯೇಟರ್ ಬಳಿ ಬೋರೇಗೌಡ ಎನ್ನುವ ಲೋಕಾಯುಕ್ತ ಸಿಬ್ಬಂದಿ 2 ಬಟ್ಟಲುಗಳಲ್ಲಿ ದ್ರಾವಣವನ್ನು ತಯಾರಿಸಿದರು. ಸದರಿ ದ್ರಾವಣ ಬಿಳಿ ಬಣ್ಣದ್ದಾಗಿತ್ತು. ಸದರಿ ದ್ರಾವಣದಲ್ಲಿ ಮೊದಲು ಮೋಹನರವರ ಬಲಗೈಯನ್ನು ಅದ್ದಿಸಿದರು. ಸದರಿ ದ್ರಾವಣ ಗುಲಾಬಿ ಬಣ್ಣಕ್ಕೆ ತಿರುಗಿತು. ಸದರಿ ದ್ರಾವಣವನ್ನು ಒಂದು ಬಾಟಲಿನಲ್ಲಿ ಹಾಕಿ ಕ್ಯೂ ಎಂಬ ಅಕ್ಷರದಿಂದ ಸೀಲು ಮಾಡಿ ವಶಪಡಿಸಿಕೊಂಡರು. ಸದರಿ ಬಾಟಲ್ ಆದ ಎಂ.ಓ.5 ನ್ನು ಹಾಗೂ ಅದರ ಮೇಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**17.** ಇನ್ನೊಂದು ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಮೋಹನರವರ ಎಡಗೈಯನ್ನು ಅದ್ದಿಸಿದರು. ಸದರಿ ದ್ರಾವಣ ಗುಲಾಬಿ ಬಣ್ಣಕ್ಕೆ ತಿರುಗಿತು. ಸದರಿ ದ್ರಾವಣವನ್ನು ಒಂದು ಬಾಟಲಿನಲ್ಲಿ ಹಾಕಿ ಕ್ಯೂ ಎಂಬ ಅಕ್ಷರದಿಂದ ಸೀಲು ಮಾಡಿ ವಶಪಡಿಸಿಕೊಂಡರು. ಸದರಿ ಬಾಟಲ್ ಆದ ಎಂ.ಓ.6 ನ್ನು ಹಾಗೂ ಅದರ ಮೇಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**18.** ಲೋಕಾಯುಕ್ತ ಅಧಿಕಾರಿ ಆರೋಪಿಗೆ ನೀವು ತೆಗೆದುಕೊಂಡಿರುವ ಹಣವನ್ನು ಕೊಡಿ ಎಂದು ಹೇಳಿದರು. ಆಗ ಆರೋಪಿಗೆ ತಮ್ಮ ಪ್ಯಾಂಟಿನ ಹಿಂಭಾಗದಲ್ಲಿ ಇಟ್ಟುಕೊಂಡಿದ್ದ ಹಣವನ್ನು ತೆಗೆದು ಹಾಜರುಪಡಿಸಿದರು. ಸದರಿ ಹಣವನ್ನು ಪಂಚ - 1 ರವರ ಕೈ ಕೊಟ್ಟು ಹಿಂದೆ ಬರೆದುಕೊಂಡಿದ್ದ ಚೀಟಿಯೊಂದಿಗೆ ಹೋಲಿಸಿ ನೋಡುವಂತೆ ಹೇಳಿದರು. ಅದರಂತೆ ಪಂಚ - 1 ರವರು ಸದರಿ ಹಣವನ್ನು ತಾಳೆ ಮಾಡಿ ನೋಡಿ ಅದು ಸರಿಯಾಗಿದೆ ಎಂದು ಹೇಳಿದರು. ಸದರಿ ಹಣವನ್ನು ಒಂದು ಕವರಿನಲ್ಲಿ ಹಾಕಿ ಪ್ಯಾಕ್ ಮಾಡಲಾಯಿತು.

**19.** ಆರೋಪಿಗೆ ಬದಲಿ ಪ್ಯಾಂಟನ್ನು ಕೊಡಲಾಯಿತು. ಆರೋಪಿ ಧರಿಸಿದ್ದ ಪ್ಯಾಂಟನ್ನು ತೆಗೆದುಕೊಂಡು ಹಿಂದಿನ ಜೇಬನ್ನು ದ್ರಾವಣದಲ್ಲಿ ಅದ್ದಿದರು. ಸದರಿ ದ್ರಾವಣ ಆಗ ಗುಲಾಬಿ ಬಣ್ಣಕ್ಕೆ ತಿರುಗಿತು. ಸದರಿ ದ್ರಾವಣವನ್ನು ಒಂದು

ಬಾಟಲಿನಲ್ಲಿ ಹಾಕಿ ಕ್ಯೂ ಎಂಬ ಅಕ್ಷರದಿಂದ ಸೀಲು ಮಾಡಿದರು. ಸದರಿ ಬಾಟಲ್ ಆದ ಎಂ.ಓ.7 ನ್ನು ಹಾಗೂ ಅದರ ಮೇಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಆರೋಪಿಯ ಪ್ಯಾಂಟನ್ನು ಕವರಿನಲ್ಲಿ ಹಾಕಿ ಕ್ಯೂ ಎಂಬ ಅಕ್ಷರದಿಂದ ಸೀಲು ಮಾಡಿ ವಶಪಡಿಸಿಕೊಂಡರು. ಸದರಿ ಪ್ಯಾಂಟಾದ ಎಂ.ಓ.8 ನ್ನು ಹಾಗೂ ಅದನ್ನು ಪ್ಯಾಕ್ ಮಾಡಿರುವ ಕವರಿನ ಮೇಲಿರುವ ಚೀಟಿಯಲ್ಲಿನ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**20.** ವಸ್ತುಗಳನ್ನು ವಶಪಡಿಸಿಕೊಳ್ಳಲು ಉಪಯೋಗಿಸಿದ ಸೀಲನ್ನು ಪಂಚ - 1 ರವರ ಕೈಗೆ ಕೊಟ್ಟರು. ಆ ಬಗ್ಗೆ ಪಂಚ - 1 ರವರಿಂದ ಬರೆಸಿಕೊಂಡರು. ಸದರಿ ಸೀಲಿನ ಮಾದರಿಯನ್ನು ತೆಗೆದುಕೊಂಡರು. ಸದರಿ ಮಾದರಿ ಸೀಲಿನ ಪತ್ರವಾದ ನಿಪಿ.31 ನ್ನು ಹಾಗೂ ಅದರ ಮೇಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ಈಗ ನಿಪಿ.31(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಕ್ಯೂ ಸೀಲಾದ ಎಂ.ಓ.9 ನ್ನು ನೋಡಿ ಗುರುತಿಸಿರುತ್ತಾರೆ.

**21.** ಘಟನೆಯ ಬಗ್ಗೆ ತನಿಖಾಧಿಕಾರಿ ಆರೋಪಿಯನ್ನು ವಿಚಾರಿಸಿದಾಗ ಆರೋಪಿ ತಮ್ಮ ಲಿಖಿತ ಹೇಳಿಕೆ ಕೊಟ್ಟರು. ಸದರಿ ಹೇಳಿಕೆಗೆ ನಾನು ಸಹಿ ಮಾಡಿರುತ್ತೇನೆ. ಸದರಿ ಹೇಳಿಕೆಯಾದ ನಿಪಿ.28 ನ್ನು ಹಾಗೂ ಅದರ ಮೇಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ಈಗ ನಿಪಿ.28(ಬಿ) ಎಂದು ಗುರುತಿಸಲಾಯಿತು.

**22.** ಶಾನ್ ಥಿಯೇಟರ್ ಬಳಿ ಲೋಕಾಯುಕ್ತ ಅಧಿಕಾರಿ ಮಹಜರ ಮಾಡಿದರು ಹಾಗೂ ನಕ್ಷೆ ತಯಾರಿಸಿದರು. ಸದರಿ ಮಹಜರಾದ ನಿಪಿ.3 ನ್ನು ಹಾಗೂ ಅದರ ಮೇಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ಈಗ ನಿಪಿ.3(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಕ್ಷೆಯಾದ ನಿಪಿ.27 ನ್ನು ಹಾಗೂ ಅದರ ಮೇಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ಈಗ ನಿಪಿ.27(ಬಿ) ಎಂದು ಗುರುತಿಸಲಾಯಿತು.

**23.** ಲೋಕಾಯುಕ್ತ ಪೊಲೀಸರು ಘಟನಾ ಸ್ಥಳದ ಫೋಟೋಗಳನ್ನು ತೆಗೆದುಕೊಂಡರು. ಸದರಿ ಫೋಟೋಗಳಾದ ನಿಪಿ.16 ರಿಂದ ನಿಪಿ.20 ನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**24.** ಘಟನೆಯಾದ ಒಂದು ವಾರದ ನಂತರ ಲೋಕಾಯುಕ್ತ ಪೊಲೀಸರು ನನ್ನನ್ನು ಕರೆಸಿ, ಫೋಟೋಗಳನ್ನು ತೋರಿಸಿದ್ದು, ಅವುಗಳಿಗೆ ನಾನು ಸಹಿ ಮಾಡಿರುತ್ತೇನೆ.

**(ಈ ಹಂತದಲ್ಲಿ ಸದರಿ ಸಾಕ್ಷಿಯು ಅಭಿಯೋಜನ ಪಕ್ಷದ ಪ್ರಕರಣಕ್ಕೆ ಅನುಗುಣವಾಗಿ ಸಾಕ್ಷ್ಯ ನುಡಿಯುತ್ತಿಲ್ಲವಾದ ಕಾರಣ ಆತನನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದರ ಮೇರೆಗೆ ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅಭಿಯೋಜಕರ ಪಾಟೀ ಸವಾಲಿಗೆ ಅನುಮತಿ ನೀಡಲಾಗಿದೆ.)**

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ ಃ**

**25.** ಶಾನ್ ಥಿಯೇಟರ್ ಬಳಿ ಲೋಕಾಯುಕ್ತ ಅಧಿಕಾರಿಗಳು 2 ಬಟ್ಟಲುಗಳಲ್ಲಿ ತಯಾರಿಸಿದ ದ್ರಾವಣದ ಪೈಕಿ ಸ್ವಲ್ಪ ಮಾದರಿಯನ್ನು 2 ಬಟ್ಟಲುಗಳಿಂದ ತೆಗೆದುಕೊಂಡು ಒಂದು ಬಾಟಲಿನಲ್ಲಿ ಹಾಕಿ ಕ್ಯೂ ಎಂಬ ಅಕ್ಷರದಿಂದ ಸೀಲು ಮಾಡಿ ವಶಪಡಿಸಿಕೊಂಡರು ಅಂದರೆ ಸರಿ. ಸದರಿ ಬಾಟಲಿಗೆ ನಾನು ಸಹಿ ಮಾಡಿರುತ್ತೇನೆ ಅಂದರೆ ಸರಿ. ಸದರಿ ಬಾಟಲಾದ ಎಂ.ಒ.4 ನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ**

**(ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ರಮಾ ಬಿ.ಜಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.